ದಿನಾಂಕ 30.04.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿ ಪರವಾಗಿ ಶ್ರೀ.ಸಿ.ಎಸ್.ಕೆ ವಕೀಲರಿಂದಃ

12. 4ನೇ ಪ್ರತಿವಾದಿಯ ಮಗ ಸಾಕೇತ್ 2000 ನೇ ಇಸವಿಯಲ್ಲಿ ಜನಿಸಿದ್ದಾರೆ ಎಂದರೆ ಹೌದು. ನಾರಾಯಣಗೌಡರವರು ಕರೋನಾ ಅವಧಿಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಇರಬಹುದು ನಾನು ಆಗ ಹೋಗಲಿಲ್ಲ. ನಾನು ಮತ್ತು ನನ್ನ ಮಗ ನಾರಾಯಣಗೌಡರವರ ವರ್ಷದ ತಿಥಿ ಕಾರ್ಯಕ್ಕೆ ಹೋಗಿ ಊಟ ಮಾಡದೇ ಬಂದಿರುತ್ತೀರಿ ಎಂದರೆ ಸಾಕ್ಷಿ ನನಗೆ ಆರೋಗ್ಯ ಸರಿಯಿಲ್ಲದ ಕಾರಣ ಪ್ರಸಾದವನ್ನು ತೆಗೆದುಕೊಂಡು ಬಂದಿರುತ್ತೇನೆ. ನಾರಾಯಣಗೌಡರವರ ವರ್ಷದ ತಿಥಿಯ ದಿನ HDFC ಬ್ಯಾಂಕಿಗೆ ಹೋಗಿ 2ನೇ ಪ್ರತಿವಾದಿಯ ಬ್ಯಾಂಕ್‌ಸ್ಟೇಟ್ ಮೆಂಟನ್ನು ತೆಗೆದುಕೊಂಡು ಬಂದಿರುತ್ತೀರಿ ಎಂದರೆ ಸಾಕ್ಷಿ ನಾರಾಯಣಗೌಡರವರ ಮರಣಪ್ರಮಾಣಪತ್ರವನ್ನು ತೋರಿಸಿ ಅಕೌಂಟ್ ಸ್ಟೇಟ್‌ಮೆಂಟನ್ನು ತೆಗೆದುಕೊಂಡು ಬಂದಿದ್ದೇನೆ. ಸಾಕ್ಷಿ ಮುಂದುವರೆದು ವರ್ಷದ ತಿಥಿ ದಿನವಾ ಅಥವಾ ಹಿಂದೆ ಅಥವಾ ಮುಂದೆ ದಿನವಾ ಎಂದು ನಿಖರವಾಗಿಲ್ಲ ಗೊತ್ತಿಲ್ಲ. ನಾರಾಯಣಗೌಡರವರ ತಿಥಿ ದಿನಾಂಕ ನಿಮಗೆ ಗೊತ್ತಿದ್ಯಾ ಎಂದರೆ ಹೌದು. ದಿನಾಂಕ ಯಾವುದು ಗೊತ್ತಾ ಎಂದರೆ ಮರೆತುಹೋಗಿದೆ.

13. ನಾರಾಯಣಗೌಡರವರು ಕರೋನಾದಿಂದ ಆಸ್ಪತ್ರೆಗೆ ದಾಖಲಾಗಿದ್ದಾಗ ನಾನಾಗಲೀ ಅಥವಾ ನನ್ನ ಹೆಂಡತಿಯಾಗಲೀ ಹೋಗಿ ನೋಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ 1 ದಿನ ಮುಂಚೆ ಗೊತ್ತಾಗಿರುತ್ತದೆ ಆಗ Movement ಗಳ restriction ಇತ್ತು. ನಾರಾಯಣಗೌಡರವರ ಅಂತ್ಯ ಸಂಸ್ಕಾರವನ್ನು ವಾದಿಯ ಗಂಡ ಹಾಗೂ 4ನೇ ಪ್ರತಿವಾದಿಯ ಗಂಡ ಸುಖೇಶ್ ನಾಗರಾಜುರವರು ಮಾಡಿರುತ್ತಾರೆ ನಾವು ಭಾಗವಹಿಸಿಲ್ಲ ಎಂದರೆ ಹೌದು. ಆಗ Movement restriction ಹೆಚ್ಚಾಗಿತ್ತು ಆಗ ಮನೆಯಲ್ಲಿ ನಾನು ಮತ್ತು ನನ್ನ ಮಗ ಮಾತ್ರ ಇದ್ದೀ. ನನ್ನ ಹೆಂಡತಿ Australia ದಲ್ಲಿ ಇದ್ದರು. ಆ ಸಮಯದಲ್ಲಿ ನನ್ನ ಹೆಂಡತಿ Australia ದಲ್ಲಿ ಇದ್ದರು ಎಂದು ತೋರಿಸಲು ಹೆಂಡತಿಯ Passport ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಇಲ್ಲ. ಮುಂದಿನ ದಿನಾಂಕ ಹಾಜರುಪಡಿಸಬಹುದಾ ಎಂದರೆ ಹೌದು.

14. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳು ನಿ.ಡಿ 1 ಮತ್ತು 2 ರನ್ನು ಹೊರತುಪಡಿಸಿ ಉಳಿದ ದಾಖಲೆಗಳು ನಾರಾಯಣಗೌಡರವರ ದಾನ ಕೊಟ್ಟ ನಂತರದಲ್ಲಿ ಆದ ದಾಖಲೆಗಳು ಎಂದರೆ ಸಾಕ್ಷಿ ನಾರಾಯಣಗೌಡರವರು ಎಲ್ಲಾ ದಾಖಲೆಗಳನ್ನು ಮಾಡಿಸಿ ನಮಗೆ ಕೊಟ್ಟಿದ್ದಾರೆ. ಎಲ್ಲಾ ದಾಖಲೆಗಳನ್ನು ನಾವೇ ಮಾಡಿಸಿಕೊಂಡು ನಾರಾಯಣಗೌಡರವರು ಮಾಡಿಸಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ನಾರಾಯಣಗೌಡರವರು 4ನೇ ಪ್ರತಿವಾದಿಗೆ 2013ರಲ್ಲಿ 16 ಗುಂಟೆ, 2014ರಲ್ಲಿ 10 ಗುಂಟೆಯನ್ನು ದಾನ ಪತ್ರದ ಮೂಲಕ ಕೊಟ್ಟಿದ್ದಾರೆ ಎಂದು ತಿಳಿಸಿದೀರಿ ಎಂದರೆ ಹೌದು. ಸಾಕ್ಷಿ ಮುಂದುವೆರದು 2-3 ದಿನಗಳ ಅಂತರದಲ್ಲಿ ಅವರಿಗೂ ಸಹ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಾರಾಯಣಗೌಡರವರು 3ನೇ ಪ್ರತಿವಾದಿಗೆ 1 ಎಕರೆ 7 ಗುಂಟೆ, 4ನೇ ಪ್ರತಿವಾದಿಗೆ 26 ಗುಂಟೆ ದಾನ ಪತ್ರದ ಮೂಲಕ ಕೊಟ್ಟಿದ್ದು ವಾದಿಗೆ ಏನನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿ 20 ಗುಂಟೆಯಲ್ಲಿ 10 ಗುಂಟೆ ವಾದಿಗೆ ಹೋಗಿದೆ ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ 4ನೇ ಪ್ರತಿವಾದಿಗೆ 26 ಗುಂಟೆ, 3ನೇ ಪ್ರತಿವಾದಿಗೆ 1 ಎಕರೆ 7 ಗುಂಟೆ, ವಾದಿಗೆ 10 ಗುಂಟೆ ಮಾತ್ರ ಕೊಟ್ಟಿದ್ದಾರೆ ಎಂದು ಹೇಳುತ್ತೀರಿ ಎಂದರೆ ಹೌದು.

15. ನಾನು ಮತ್ತು ನನ್ನ ಹೆಂಡತಿ ನಾರಾಯಣಗೌಡರವರಿಗೆ ಒತ್ತಡ ತಂದು ಹೆಚ್ಚು ಆಸ್ತಿಯನ್ನು ಬರೆಸಿಕೊಂಡಿದ್ದೀರಿ ಎಂದರೆ ಸುಳ್ಳು. ನನ್ನ ಪ್ರಮಾಣಪತ್ರದಲ್ಲಿ ವಾದಿಯು ಸ್ವಲ್ಪ ದಿನ ಮಾತ್ರ ಕೊಲ್ಕತ್ತದಲ್ಲಿ ಇದ್ದು ನಂತರ ಜಯಮಹಲ್ ಬೆಂಗಳೂರಿನಲ್ಲಿ ವಾಸವಿದ್ದರು ಎಂದು ತಿಳಿಸಿದೀರಿ ಎಂದರೆ ಸಾಕ್ಷಿ ವಾದಿ ಕೊಲ್ಕತ್ತಕ್ಕೆ ಹೋಗಿ ಬಂದು ಅವರ ತಂದೆ ಮನೆಯಲ್ಲಿದ್ದರು. ವಾದಿ ಕೆಲವೇ ತಿಂಗಳು ಮಾತ್ರ ಕೊಲ್ಕತ್ತದಲ್ಲಿ ಇದ್ದರು ಎಂದು ತಿಳಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿ ಮತ್ತು ಅವರ ಗಂಡ 1997 ರಿಂದ 2003 ರವರೆಗೆ ಬಾಂಬೆಯಲ್ಲಿ ವಾಸವಿದ್ದರು ವಾದಿಯ ಗಂಡ ಶ್ರೀನಿವಾಸ್ ಬಾಟಲಿಬಾಯ್ ಲಿ ಕೆಲಸ ಮಾಡುತ್ತಿದ್ದರು ಎಂದರೆ ಅದು ನನಗೆ ಅಷ್ಟು ಗೊತ್ತಿಲ್ಲ ಆದರೆ ಬಾಂಬೆಯಲ್ಲಿ ಇದ್ದರು ಎಂಬುವುದು ಗೊತ್ತು ಎಷ್ಟು ಅವಧಿಯವರೆಗೆ ಇದ್ದರು ಎಂಬುದು ನನಗೆ ಗೊತ್ತಿಲ್ಲ. 2003-2004 ರಲ್ಲಿ ಗಾನದ ಪಾಲಿಕ್ರಾಫ್ಟ್ ಎಂಬಲಿ ಕೆಲಸ ಮಾಡುತ್ತಿದ್ದರು ಎಂದರೆ ಹೌದು. ವಾದಿ ಮತ್ತು ಅವರ ಗಂಡ 2004 ರಿಂದ 2009 ರವರೆಗೆ ನೈಜಿರಿಯಾದ ಆಫ್ರಿಕನ್ industries company ಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಹೌದು ನಾನೇ ಕೆಲಸ ಕೊಡಿಸಿಕೊಟ್ಟಿದೆ. ನಾನೇ ಕೆಲಸ ಕೊಡಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ವಿದ್ಯಾರ್ಹತೆಯ ಮೇಲೆ ಕೆಲಸ ಸಿಕ್ಕಿದೆ ಎಂದರೆ ಸುಳ್ಳು.

16. ವಾದಿಯ ಗಂಡ IIT ಚೆನ್ನೈನಲ್ಲಿ M'tech ಪದವಿಯನ್ನು ಪಡೆದಿದ್ದಾರೆ ಎಂದರೆ ಕೇಳಿದ್ದೇನೆ ಪ್ರಮಾಣಪತ್ರವನ್ನು ನೋಡಿಲ್ಲ. 2009 ರಿಂದ 2015 ರವರೆಗೆ ವಾದಿಯ ಗಂಡ ಕೊಲ್ಕತ್ತದ ಗೇಸನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. 2003 ರಿಂದ 2013 ರವರೆಗೆ ವಾದಿಯ ಮಗ ಶರಣ್ ಶ್ರೀನಿವಾಸ್ ರವರು ನಾರಾಯಣಗೌಡರವರ ಜೊತೆಯಲೇ ಇದ್ದು ಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರೆ ಆತ ಮತ್ತು ಸುಖೇಶ್ ಇಬ್ಬರು ಮೊಮಕ್ಕಳು ಸಹ ಹುಟ್ಟಿದ್ದಾಗಿನಿಂದಲೂ ಅವರ ಮನೆಯಲ್ಲೇ ಇದ್ದರು. ಆದರಿಂದ ವಾದಿ ಸ್ವಲ್ಪ ದಿನಗಳು ಮಾತ್ರ ಕೊಲ್ಕತ್ತದಲ್ಲಿ ಇದ್ದರು ಎಂದು ಹೇಳುವುದು ಸುಳ್ಳು ಎಂದರೆ ಸಾಕ್ಷಿ ನನಗೆ ಗೊತ್ತಿರುವ ಪ್ರಕಾರ 1 ವಾರ ಅಲ್ಲಿ 3 ವಾರ ಇಲ್ಲಿ ಬಂದು ಹೋಗಿ ಮಾಡುತ್ತಿದ್ದರು ಎಂಬುದು ಮಾತ್ರ ಗೊತ್ತು.

17. ವಾದಿಯ ಮಗ ಬೆಂಗಳೂರಿನ MES Kishora ಕೇಂದ್ರದಲ್ಲಿ PUC, Engineering ನ MS Ramaiah College ನಲ್ಲಿ ಮಾಡುತ್ತಿದ್ದರು ಎಂದರೆ ಎಲ್ಲಿ ಓದಿದ್ದಾರೆ ಗೊತ್ತಿಲ್ಲ ಆದರೆ Engineering ಮಾಡಿರುವುದು ಗೊತ್ತು. ಎಲ್ಲಾ ಮಾಹಿತಿ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ನನ್ನ ಹೆಂಡತಿ 2ನೇ ಪ್ರತಿವಾದಿ ಕೊಟ್ಟ ನೆಲ ಅಂತಸ್ತಿನ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದೇವು ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಅಲ್ಲಿ ನನ್ನ ಮಾವ ಸ್ಕೂಲ್ ನಡೆಸುವವರಿಗೆ ಬಾಡಿಗೆಗೆ ಕೊಟ್ಟಿದ್ದರು ನಂತರ ನಮಗೆ ಬಂದ ನಂತರ ನಾವು ವಾಸವಿರಲಿಲ್ಲ ಆ ನಂತರ ಬಾಡಿಗೆಗೆ ಕೊಟ್ಟಿದ್ದೇವು ಎಂದು ಹೇಳುತ್ತಾರೆ. ಯಾವ ಇಸವಿಯಲ್ಲಿ ಬಾಡಿಗೆಗೆ ಕೊಟ್ಟಿದೀರಿ ಎಂದರೆ ದಿನಾಂಕ ನೆನಪಿಗೆ ಬರುವುದಿಲ್ಲ ದಾಖಲೆ ನೋಡಿ ಹೇಳಬೇಕು. 2ನೇ ಪ್ರತಿವಾದಿ ನನ್ನ ಹೆಂಡತಿಗೆ ದಿನಾಂಕ 22.12.2014 ರಲ್ಲಿ ದಾನ ಪತ್ರವನ್ನು ಬರೆದು ಕೊಟ್ಟಿದ್ದಾರೆ ಎಂದರೆ ಹೌದು. ದಾನ ಪತ್ರದ ಮೂಲಕ ಕೊಟ್ಟ ಆಸ್ತಿಯನ್ನು ವಾಪಸ್ ಪಡೆದುಕೊಳ್ಳಬೇಕೆಂದು 2ನೇ ಪ್ರತಿವಾದಿ Senior citizen welfare ನಲ್ಲಿ ಪ್ರಕರಣವನ್ನು ದಾಖಲಿಸಿ ಅದು ಪುರಸ್ಕೃತಗೊಂಡಿದ್ದು ಅದರ ಮೇಲೆ ನಾವು ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದೇವೆ ಎಂದರೆ ಹೌದು ಅದು ರಾಜಿ ಆಗಿ ತೀರ್ಮಾನವಾಗಿದೆ. ರಾಜಿ ಅರ್ಜಿಯ ಪ್ರಕಾರ ನಡೆದುಕೊಳ್ಳದೇ ಇದ್ದ ಕಾರಣ ಅದು ಅನೂರ್ಜಿತವಾಗಿದೆ ಎಂದರೆ ಇಲ್ಲ ದಾಖಲಾತಿಯ ಪ್ರಕಾರ ಎಲ್ಲವನ್ನು ಸರಿಪಡಿಸಿದ್ದೇವೆ.

19. ನನ್ನ ಪ್ರಮಾಣಪತ್ರದ ಖಂಡಿಕೆ 9 ರಲ್ಲಿ ತಿಳಿಸಿರುವಂತೆ ದಾವಾ ಸ್ವತ್ತುಗಳು ನನ್ನ ಹೆಂಡತಿಯ ಸ್ವಯಾರ್ಜಿತ ಸ್ವತ್ತುಗಳು ಅವುಗಳನ್ನು ನಾರಾಯಣಗೌಡರವರು ದಾನಪತ್ರದ ಮೂಲಕ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದೀರಿ ಎಂದರೆ ಸರಿಯಲ್ಲ. ಪ್ರಮಾಣಪತ್ರ ಖಂಡಿಕೆ 5, 6 ಮತ್ತು 8 ರಲ್ಲಿ ದಾವಾಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಅಲ್ಲ ಎಂದರೆ ನಾರಾಯಣಗೌಡರ ಸ್ವಯಾರ್ಜಿತ ಸ್ವತ್ತುಗಳು. ದಾವಾಸ್ವತ್ತುಗಳಲ್ಲದೇ ಮತ್ತಿತ್ತರ ಸ್ವತ್ತುಗಳು ನಾರಾಯಣಗೌಡರಿಗೆ 5 ವರ್ಷ ಇದ್ದಾಗ ಅಂದರೆ 1936 ರಲ್ಲಿ ಹಕ್ಕು ನಿವೃತ್ತಿ ಪತ್ರದಿಂದ ಬಂದಿವೆ ಎಂದರೆ ನನಗೆ ಗೊತ್ತಿಲ್ಲ. ದಾಖಲಾತಿಯನ್ನು ನೋಡಿಲ್ಲ. ನಿಮ್ಮ ಪ್ರಕಾರ ನಾರಾಯಣಗೌಡರಿಗೆ ದಾವಾ ಷೆಡ್ಯೂಲ್ ಸ್ವತ್ತುಗಳು ಹೇಗೆ ಬಂದಿದೆ ಎಂದರೆ ನನಗೆ ಗೊತ್ತಿರುವ ಪ್ರಕಾರ ವಿಭಾಗ ಪತ್ರದ ಮೂಲಕ ನಾರಾಯಣಗೌಡರಿಗೆ ಅವರ ಇಬ್ಬರ ತಮ್ಮಂದಿರಿಗೆ ಮತ್ತು ಅವರ ಮೂರು ಜನ ಮಕ್ಕಳಿಗೆ ಬಂದಿರುತ್ತದೆ. ಅವುಗಳು ಒಟ್ಟು ಕುಟುಂಬದ ಆಸ್ತಿಗಳಾದ ಕಾರಣ ನೀವು ಹಾಜರುಪಡಿಸಿರುವ ದಾಖಲಾತಿಯ ಪ್ರಕಾರ 1993 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ವಿಭಾಗ ಪತ್ರ ಮಾಡಿಕೊಂಡು ಮಕ್ಕಳಿಗೂ ಕೊಟ್ಟು ಅವರು ಸ್ವಲ್ಪ ಉಳಿಸಿಕೊಂಡಿದ್ದಾರೆ.

20. ನಿ.ಡಿ 1 ರ ಖಂಡಿಕೆ 1 ರಲ್ಲಿ ನಾರಾಯಣಗೌಡರಿಗೆ ಅವರ ತಂದೆ ಕಂಚೆಗೌಡ @ ತಮ್ಮಣ್ಣಗೌಡರವರಿಂದ ದಿನಾಂಕ 04.03.1936 ರಲ್ಲಿ ನೋಂದಾಯಿತ ಹಕ್ಕು ನಿವೃತ್ತಿ ಪತ್ರದ ಮೂಲಕ ಬಂದಿದೆ ಎಂದು ತಿಳಿಸಿದ್ದಾರೆ ಎಂದರೆ ನಿ.ಡಿ 1 ರಲ್ಲಿ ಬರೆದಿರುತ್ತದೆ. ನಾರಾಯಣಗೌಡ ಮತ್ತು ಅವರ ಮಕ್ಕಳಿಗೆ ದಾವಾ ಸ್ವತ್ತುಗಳು ವಿಭಾಗ ಪತ್ರದ 'ಎ' ಷೆಡ್ಯೂಲ್ ನ ಐಟಂ ನಂ.1 ಎಂದರೆ ಅದು ಅವರ ಸ್ವಯಾರ್ಜಿತ ಸ್ವತ್ತು. ನಿ.ಡಿ 1 ರ 4ನೇ ಪುಟದಲ್ಲಿ 'ಎ' ಷೆಡ್ಯೂಲ್ ಅಡಿಯಲ್ಲಿ ಎಂ.ಟಿ ನಾರಾಯಣಗೌಡ ಆದ ನಾನು ನನ್ನ ಪತ್ನಿಯಾದ 2ನೇ ಪ್ರತಿವಾದಿ , 1ನೇ ಶ್ರೀಮತಿ ವೀಣಾ ಶ್ರೀನಿವಾಸ್, 2ನೇ ಸುಜೇಶಿ ಸುಮನ್ ಮತ್ತು 4ನೇ ಪ್ರತಿವಾದಿ ಶ್ರೀಮತಿ ವನಿತಾಗೌಡ ರವರಿಗೆ ಸೇರಿರುವುದರಿಂದ ನಿ.ಡಿ 1 ರಲ್ಲಿ ನಮೂದು ಮಾಡಿರುವಂತೆ ಅವರಿಗೆ ಸೇರತಕ್ಕದ್ದು ಎಂದು ಬರೆದಿದೆ ಎಂದರೆ ಹೌದು ಆದರೆ ಮುಂದುವರೆದು ನಾರಾಯಣಗೌಡರು 1 ಎಕರೆ 7 ಗುಂಟೆಯನ್ನು ತಾವು ಇಟ್ಟುಕೊಂಡು ಉಳಿದವುಗಳನ್ನು ಮಕ್ಕಳು ಮತ್ತು ಹೆಂಡತಿಗೆ ಕೊಟ್ಟಿದ್ದಾರೆ. ನೀವು ಹೇಳಿದ ರೀತಿ ನಿ.ಡಿ 1 ರಲ್ಲಿ ಎಲ್ಲಿದೆ ಎಂದರೆ ನಾನು ಆ ರೀತಿ ಅರ್ಥ ಮಾಡಿಕೊಂಡಿದ್ದೇನೆ ಅಲ್ಲದೇ ನನ್ನ ಮಾವ ಆ ರೀತಿ ನನಗೆ ಹೇಳಿದ್ದಾರೆ. ಈ ವಿಚಾರವನ್ನು ನಿಮ್ಮ ಪ್ರತಿವಾದ ಪತ್ರದಲ್ಲಿ ಮತ್ತು ಕೌಂಟರ್ ಕ್ಲೇಂ ನಲ್ಲಿ ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದೀರಾ

ಎಂದರೆ ಇಲ್ಲ. ನಿ.ಡಿ 1 ರಲ್ಲಿ ಆ ರೀತಿ ಇಲ್ಲದ ಕಾರಣ ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದೀರಿ ಎಂದರೆ ಸರಿಯಲ್ಲ.

21. 2ನೇ ಪ್ರತಿವಾದಿಗೆ Jayamahal, extension, No.6, Kanchi ಸ್ವಯಾರ್ಜಿತವಾಗಿ ಬಂದ ಆಸ್ತಿ ಎಂದರೆ ನೋಡಿ ಹೇಳಬೇಕು ಅದು ಸ್ವಯಾರ್ಜಿತ ಆಸ್ತಿ ಅಲ್ಲ. ಆ ಆಸ್ತಿಯ ಕ್ರಯ ಪತ್ರವನ್ನು ನೀವು ನೋಡಿದೀರಾ ಎಂದರೆ ನೋಡಿ ಹೇಳಬೇಕು. ಎಲ್ಲಾ ವಿಚಾರ ಗೊತ್ತಿದ್ದರು ಸಹ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ತನಗೆ ಬರುತ್ತಿದ್ದ ಬಾಡಿಗೆ ಹಣದಿಂದ ಈ ಮೇಲೆ ಹೇಳಿದ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದರೆ ಸುಳ್ಳು. ಆಕೆ ಗೃಹಿಣಿ. 2ನೇ ಪ್ರತಿವಾದಿ ನಿಮ್ಮ ಹೆಂಡತಿಗೆ ಸದರಿ ಮನೆಯ ನೆಲ ಅಂತಸ್ತನ್ನು ದಾನ ಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಹೌದು. 3 ಜನ ಮಕ್ಕಳಿಗೂ 3 ಅಂತಸ್ತನ್ನು ಕೊಟ್ಟಿದ್ದಾರೆ. ಆ ಮನೆಯನ್ನು ತಾವು ಯಾವಾಗ ಸ್ವಾಧೀನಕ್ಕೆ ತೆಗೆದುಕೊಂಡಿದ್ದೀರಿ ಎಂದರೆ 2014-15 ಇರಬಹುದು ನಿಖರವಾಗಿ ಗೊತ್ತಿಲ್ಲ ನೆನಪಿಗೆ ಬರುತ್ತಿಲ್ಲ. ನನ್ನ ಮಗಳು Mount Carmel College ನಲ್ಲಿ PUC ಮಾಡಿ, BMS college engineering ಮಾಡಿದ್ದಾರೆ. ನಿಮ್ಮ ಮಗಳ engineering ವಿದ್ಯಾಭ್ಯಾಸಕ್ಕೆ ವಾದಿಯ ಗಂಡ ಶ್ರೀನಿವಾಸ್‌ರವರು J.V.Srinivasmurthy ಎಂಬ ಮ್ಯಾನೇಜ್ ಮೆಂಟ್ ವ್ಯಕ್ತಿಯ ಜೊತೆ ಮಾತನಾಡಿ ಕಡಿಮೆ ಡೊನೇಷನ್ ಗೆ ಕೊಡಿಸಿಕೊಟ್ಟಿದ್ದಾರೆ ಎಂದರೆ ನಾನು ಊರಿನಲ್ಲಿ ಇರಲಿಲ್ಲ ಹೆಂಡತಿ ಕೇಳಿ ಹೇಳಬೇಕು. ಯಾವುದಾದರು ವಿಚಾರದಲ್ಲಿ ಸುಳ್ಳು ಹೇಳಬೇಕು ಎಂದಾದರೇ ನಾನು ಊರಿನಲ್ಲಿ ಇರಲಿಲ್ಲ ಎಂದು ಹೇಳುತ್ತೀರಿ ಎಂದರೆ ನಿಜ ಇರುವುದನ್ನು ಹೇಳುತ್ತಿದ್ದೇನೆ.

22. ನನ್ನ ಪ್ರಮಾಣಪತ್ರದ ಖಂಡಿಕೆ 11 ರ ಕಡೆಯ 2 ಸಾಲಿನಲ್ಲಿ ನನ್ನ ಹೆಂಡತಿಗೆ RT Nagara ದಲ್ಲಿರುವ ಸ್ವತ್ತು ಸಂಖ್ಯೆ-62 ರಲ್ಲಿ 1/3 ಭಾಗಶಃ ಬರಬೇಕೆಂದು ತಿಳಿಸಿದೀರಾ ಎಂದರೆ ಸಾಕ್ಷಿ 1/3 ಭಾಗ ಬಾಡಿಗೆ ಹಣ ಬರಬೇಕು ಎಂದು ತಿಳಿಸಿದ್ದೇನೆ. counter claim ನ ಖಂಡಿಕೆ 3 ರ 21-22 ನೇ ಸಾಲಿನಲ್ಲಿ 3ನೇ ಪ್ರತಿವಾದಿ RT Nagara, HMT Layout ನಲ್ಲಿರುವ ಸ್ವತ್ತು ಸಂಖ್ಯೆ 62 3ನೇ ಪ್ರತಿವಾದಿಗೆ 1ನೇ ಪ್ರತಿವಾದಿಯ ವಿಲ್ ನಾಮೆ ದಿನಾಂಕ 04.06.2014 ಮೂಲಕ ಬಂದಿದ್ದು, ಅವರು 1/3 ಭಾಗದ ಮಾಲೀಕರೆಂದು ತಿಳಿಸಿದ್ದಾರೆ ಎಂದರೆ ಸಾಕ್ಷಿ ಬಾಡಿಗೆಯಲ್ಲಿ ಅವರಿಗೆ 1/3 ಅಂಶ ಬರಬೇಕು. ಅದನ್ನು ನಾವು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇವೆ. Probate ನ್ನು ನೀಡಿರುವುದರ

ವಿರುದ್ದ ಪ್ರಶ್ನೆ ಮಾಡಿ ಸಿವಿಲ್ ನ್ಯಾಯಾಲಯಲ್ಲಿ Mis-367/2024ನ್ನು ದಾಖಲಿಸಿದ್ದೇವೆ ಎಂದರೆ ಅದನ್ನು ದಾಖಲಿಸಿದ್ದೇವೆ ಅಲ್ಲದೇ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನೆಯನ್ನು ಸಹ ಮಾಡಿದ್ದೇವೆ. ನಿಮ್ಮ counter claim ನಲ್ಲಿ 1/3 ಅಂಶ ಮಾಲೀಕರು ಈ ನ್ಯಾಯಾಲಯದಲ್ಲಿ ತಿಳಿಸಿದ್ದು ಬೇರೆ ನ್ಯಾಯಾಲಯದಲ್ಲಿ ಆ ಸ್ವತ್ತಿನ ಸಂಪೂರ್ಣ ಮಾಲೀಕರು ಎಂದು ಹೇಳಿ ಸುಳ್ಳು ದಾವೆಯನ್ನು ದಾಖಲು ಮಾಡುತ್ತೀರಿ ಎಂದರೆ ಇಲ್ಲ.

23. Counter claim ನ ಖಂಡಿಕೆ 3 ರಲ್ಲಿ ವಾದಿ ಮತ್ತು ಅವರ ಗಂಡ ನಾರಾಯಣಗೌಡರ ಖಾತೆಯಲ್ಲಿದ್ದ 2 ಕೋಟಿ 10 ಲಕ್ಷ ತೆಗೆದುಕೊಂಡಿದ್ದಾರೆ ಎಂದು ತಿಳಿಸಿದ್ದು ಅದಕ್ಕೆ ದಾಖಲೆ ಇದೆಯಾ ಎಂದರೆ ಇನ್ನೂ ಬಂದಿಲ್ಲ. Contempt proceedings ಹಾಕಿದ್ದೇವೆ. ಯಾರು ಯಾರ ಮೇಲೆ ಹಾಕಿದ್ದೇವೆ ಎಂದರೆ ಕೆನರಾ ಬ್ಯಾಂಕಿನ ಮೇಲೆ ನಾವೇ ಹಾಕಿದ್ದೇವೆ. ವಾದಿ, 2ನೇ ಪ್ರತಿವಾದಿ ಮತ್ತು 4ನೇ ಪ್ರತಿವಾದಿ 2 ಕೋಟಿ 10 ಲಕ್ಷ  ಬಾಡಿಗೆ ಪಡೆದಿರುವುದಕ್ಕೆ ದಾಖಲೆ ಇದೆಯಾ ಎಂದರೆ HDFC Statement ನ್ನು ತೆಗೆದುಕೊಂಡಾಗ online ಮೂಲಕ 3 ಜನರ ಖಾತೆಗೆ ವರ್ಗಾವಣೆಯಾಗಿರುವುದು ಕಂಡು ಬರುತ್ತದೆ, ನನ್ನ ಮಾವ online ವರ್ಗಾವಣೆಯನ್ನು ಮಾಡುತ್ತಿರಲಿಲ್ಲ. 1 ಕೋಟಿ 50 ಲಕ್ಷ ನಾರಾಯಣಗೌಡ ಮತ್ತು ಅವರ ಹೆಂಡತಿಯ ಹೆಸರಿನಲ್ಲಿ ಜಂಟಿ ಖಾತೆಯಲ್ಲಿತ್ತು ನಾರಾಯಣಗೌಡ ಬದುಕಿರುವಾಗಲೇ 2ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಿದ್ದರು ಎಂದರೆ ಸಾಕ್ಷಿ ವಾದಿಗೆ, 2ನೇ ಪ್ರತಿವಾದಿ ಮತ್ತು 4ನೇ ಪ್ರತಿವಾದಿಗೆ ವರ್ಗಾವಣೆಯಾಗಿರುತ್ತದೆ ಅವರು ತೀರಿದ ನಂತರ ಅಕೌಂಟನ್ನು 2ನೇ ಪ್ರತಿವಾದಿಯ ಹೆಸರಿಗೆ ಮಾಡಿಕೊಂಡಿದ್ದಾರೆ. ಜಂಟಿ ಖಾತೆ ಇದ್ದ ಕಾರಣ ಯಾರೇ ಮೃತಪಟ್ಟರು ಉಳಿದವರ ಹೆಸರಿಗೆ ಖಾತೆ ಇರುತ್ತದೆ ಎಂದರೆ ಹೌದು. ಆದರೆ ಅದಕ್ಕೂ ಪೂರ್ವದಲ್ಲಿ online ವರ್ಗಾವಣೆಯನ್ನು ಯಾರೋ ಮಾಡಿದ್ದಾರೆ.

24. HDFC ಖಾತೆ ವರ್ಗಾವಣೆಯಾಗುವಾಗ ಹಿರಿಯ ನಾಗರೀಕರಿಗೆ ಸೌಲಭ್ಯ ಇರಲಿಲ್ಲ ಎಂದರೆ ಯಾರೋ ಒಬ್ಬರು ಕುಟುಂಬದಲ್ಲಿ online ವರ್ಗಾವಣೆಯನ್ನು ಮಾಡಿದ್ದಾರೆ. ಬ್ಯಾಂಕಿನ ಡೀಟೆಲ್ಸ್ ಬಂದರೆ ಗೊತ್ತಾಗುತ್ತದೆ. ಬ್ಯಾಂಕಿನಿಂದ ದಾಖಲೆಯನ್ನು ತೆಗೆದುಕೊಂಡು ಬರಲು ತೊಂದರೆ ಇದೆಯಾ ಎಂದರೆ ನಾವು ಅಪ್ಲೇ ಮಾಡಿದಕ್ಕೆ ಅವರು ಕೊಟ್ಟಿರುವುದಿಲ್ಲ. ನಾರಾಯಣಗೌಡರು ಮೃತಪಟ್ಟ ಸಮಯಕ್ಕೆ ಕೆನರಾ ಬ್ಯಾಂಕ್ ಮತ್ತು HDFC ಬ್ಯಾಂಕಿನಲ್ಲಿ ಜಂಟಿ ಖಾತೆ ಹೊಂದಿದ ಹಿರಿಯ ನಾಗರೀಕರಿಗೆ online ವರ್ಗಾವಣೆ ವ್ಯವಸ್ಥೆ ಇರಲಿಲ್ಲ ಎಂದರೆ ನನಗೆ

ಗೊತ್ತಿಲ್ಲ. ಕುಟುಂಬದಲ್ಲಿ online ವರ್ಗಾವಣೆ ಮಾಡಿರುವುದಕ್ಕೆ ಪೊಲೀಸ್ ದೂರನ್ನು ಮಾಡಿದೀರಾ ಎಂದರೆ ಅದು ನಮಗೆ ಇಷ್ಟ ಇರಲಿಲ್ಲ. ಈ ವಿಚಾರ ನಾರಾಯಣಗೌಡ ಸತ್ತ 1 ½ - 2 ವರ್ಷದ ನಂತರ ಬ್ಯಾಂಕ್ ಸ್ಟೇಟ್‌ಮೆಂಟ್ ನೋಡಿ ವಿಚಾರಿಸಿದ ನಂತರ ಗೊತ್ತಾಗಿದೆ.

25. 2ನೇ ಪ್ರತಿವಾದಿ 4ನೇ ಪ್ರತಿವಾದಿಯ ಜೊತೆ Jayamal ನ 1ನೇ ಅಂತಸ್ತಿನಲ್ಲಿ ವಾದಿ 2ನೇ ಅಂತಸ್ತಿನಲ್ಲಿ ವಾಸವಿದ್ದರೇ ಎಂದರೆ ಹೌದು. 2ನೇ ಪ್ರತಿವಾದಿಯ ಜವಾಬ್ದಾರಿಗಳನ್ನು ಮತ್ತು ಹೊಣೆಗಾರಿಕೆಯನ್ನು ವಾದಿ ಮತ್ತು 4ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ ಎಂದರೆ 3ನೇ ಪ್ರತಿವಾದಿಗೆ ಮನೆ ಒಳಗೆ ಹೋಗುವ ಅವಕಾಶವನ್ನು ನೀಡಿಲ್ಲ. ಅಲ್ಲದೇ ನಾವು ಆ ಕಟ್ಟಡದ ನೆಲ ಮಳಿಗೆಯಲ್ಲಿ ವಾಸವಿಲ್ಲ. ಈಗ ನನ್ನ ಮಗ ಮತ್ತು ಸೊಸೆ ಇದ್ದಾರೆ. 3ನೇ ಪ್ರತಿವಾದಿಗೆ 2ನೇ ಪ್ರತಿವಾದಿಯನ್ನು ನೋಡಿಕೊಳ್ಳುವ ಇಚ್ಛೆಯಿರುವುದಿಲ್ಲ. ಆದ್ದರಿಂದ ಅವರನ್ನು 2ನೇ ಪ್ರತಿವಾದಿ ನೋಡಲು ಯಾರು ಬಿಡುವುದಿಲ್ಲ ಎಂದು ಹೇಳುತ್ತಿದ್ದೇವೆ ಎಂದರೆ ಸುಳ್ಳು. ಅದೇ ಕಾರಣದಿಂದ 2ನೇ ಪ್ರತಿವಾದಿ AC ನ್ಯಾಯಾಲಯದಲ್ಲಿ 3ನೇ ಪ್ರತಿವಾದಿ ನನ್ನನ್ನು ನೋಡಿಕೊಳ್ಳುತ್ತಿಲ್ಲ ಎಂದು ದಾನ ಪತ್ರವನ್ನು ರದ್ದುಗೊಳಿಸುವಂತೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಇಲ್ಲ. ಆ ದಾನ ಪತ್ರ ರದ್ದಾಗಿದ್ದು ಅದರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದೀರಿ ಎಂದರೆ ಅದು ರಾಜಿಯಲ್ಲಿ ಮುಕ್ತಾಯವಾಗಿದೆ. ಯಾವುದೇ ರಾಜಿ ಆಗಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ MSC/CR:67/2021-22 ರ ದಿನಾಂಕ 01/08/2022 ರ ಆದೇಶದ ಪ್ರತಿಯನ್ನು ಒಪ್ಪುತ್ತಿಲ್ಲ ಎಂದರೆ ನಾನು ರಾಜಿ ಪತ್ರವನ್ನು ತಂದು ಹಾಜರುಪಡಿಸುತ್ತೇನೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)